## ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀ ಬಿ.ಆರ್.ಸಾಲೋಟಗಿ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ನಿಟ್ಟೆ ಗ್ರಾಮ ಪಂಚಾಯತಿ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ, ಇವರ ವಿರುದ್ಧ ನಡೆಸಲಾದ ಇಲಾಖಾ ವಿಚಾರಣೆ – ಅಂತಿಮ ಆದೇಶ ಹೊರಡಿಸುವ ಬಗ್ಗೆ – ಆದೇಶ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 599 ಗ್ರಾಪಂಕಾ 2012 ದಿನಾಂಕ:03.11.2012.
2. ಅಪರ ನಿಬಂಧಕರು, ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ಮಾನ್ಯ ಉಪಲೋಕಾಯುಕ್ತರಿಗೆ ಸಲ್ಲಿಸಿದ ವಿಚಾರಣಾ ವರದಿ ಸಂಖ್ಯೆ: LOK/14-A/ENQ-454/2012/ARE-10, ದಿನಾಂಕ:30.01.2018.
3. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಶಿಫಾರಸ್ಸು ಸಂಖ್ಯೆ: LOK/14-A/ENQ-454/2012/ARE-10, ದಿನಾಂಕ:08.02.2018.
4. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂಖ್ಯೆ: LOK/14-A/ENQ-454/2012/ARE-10, ದಿನಾಂಕ:08.02.2018.
5. ಸರ್ಕಾರದ 2ನೇ ಕಾರಣ ಕೇಳುವ ನೋಟೀಸ್ ಸಂಖ್ಯೆ:ಗ್ರಾಅಪ 82 ಗ್ರಾಪಂಕಾ 2018, ದಿನಾಂಕ: 21.02.2018.
6. ಶ್ರೀ ಬಿ.ಆರ್.ಸಾಲೋಟಗಿ, ಇವರು ಸರ್ಕಾರದ 2ನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಲಿಖಿತ ಹೇಳಿಕೆ ದಿನಾಂಕ: 26.03.2018.

**ಪ್ರಸ್ತಾವನೆ :**

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ ಬಿ.ಆರ್.ಸಾಲೋಟಗಿ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ನಿಟ್ಟೆ ಗ್ರಾಮ ಪಂಚಾಯತಿ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ, ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 14ಎ ಅಡಿಯಲ್ಲಿ ಮಾನ್ಯ ಉಪಲೋಕಯುಕ್ತರಿಗೆ ವಹಿಸಲಾಗಿತ್ತು. ಅದರಂತೆ ಅಪರ ನಿಬಂಧಕರು ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ, ಇವರು ಸದರಿಯವರ ವಿರುದ್ಧ ಈ ಕೆಳಕಂಡ ಆರೋಪದ ಮೇಲೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 11ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಿರುತ್ತಾರೆ.

**“ ದೋಷಾರೋಪಣೆ:**

“ Sri B.R.Salotagi, the DGO while working as Development Officer of Nitte Grama Panchayathi in Karkala Taluk of Udupi District, the complainant namely Sandeep Kumar of Nadalike in Karkala Taluk approached on 07.09.2010 to enquire about permission to start ice-cream factory in the rented building of Sri Sadashiva Hegde at Nitte and then asked the complainant to pay bribe of Rs.2,000/- and on 09/09/2010 received bribe of Rs.1,000/-from the complainant to show official favour, failing to maintain absolute integrity and devotion to duty, which act as unbecoming of a Government servant and thus committed misconduct as enumerated under rule 3(1)(i) to (iii) of the Karnataka Civil Service(conduct)Rules 1966.”

ವಿಚಾರಣಾಧಿಕಾರಿಗಳು ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ವರದಿಯಲ್ಲಿ ಶ್ರೀ ಬಿ.ಆರ್.ಸಾಲೋಟಗಿ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ನಿಟ್ಟೆ ಗ್ರಾಮ ಪಂಚಾಯತಿ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ, ಇವರ ವಿರುದ್ಧದ ಆರೋಪವು ಸಾಬೀತಾಗಿದೆಯೆಂದು ನಿರ್ಣಯಿಸಿರುತ್ತಾರೆ. ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತರು ಅಂಗೀಕರಿಸಿ ಶ್ರೀ ಬಿ.ಆರ್.ಸಾಲೋಟಗಿ, ಇವರ ವಿರುದ್ಧ ಸಾಬೀತಾಗಿರುವ ಆರೋಪಕ್ಕೆ ಅನುಗುಣವಾಗಿ ಸದರಿಯವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8(iii) ಅಡಿಯಲ್ಲಿ ನಿರ್ದಿಷ್ಟಪಡಿಸಿರುವಂತೆ " ಅವರ ಪಿಂಚಣಿಸೌಲಭ್ಯದಲ್ಲಿ ಶೇ.25%ರಷ್ಟು ಮೊತ್ತವನ್ನು ನಿರಂತರವಾಗಿ ಕಡಿತಗೊಳಿಸುವ" ದಂಡನೆ ವಿಧಿಸಲು ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ವರದಿಯಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಈ ಸಂಬಂಧ ಶ್ರೀ ಬಿ.ಆರ್.ಸಾಲೋಟಗಿ, ಇವರಿಗೆ ನಿಯಮಾನುಸಾರ ಕ್ರಮಸಂಖ್ಯೆ (5) ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ ವಿಚಾರಣಾಧಿಕಾರಿಯವರ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನ ಪ್ರತಿಯೊಂದಿಗೆ 2ನೇ ಕಾರಣ ಕೇಳುವ ನೋಟೀಸ್ ಅನ್ನು ಜಾರಿಗೊಳಿಸಲಾಗಿತ್ತು. ಈ ನೋಟೀಸಿಗೆ ಅವರು ಮೇಲೆ ಕ್ರಮ ಸಂಖ್ಯೆ (6) ರಲ್ಲಿ ಓದಲಾದ 14/03/2018 ಮತ್ತು 26.03.2018ರ ಮನವಿಯ ಮೂಲಕ ತಮ್ಮ ಲಿಖಿತ ಹೇಳಿಕೆ ಸಲ್ಲಿಸಿರುತ್ತಾರೆ.

ಆಪಾದಿತ ನೌಕರರು ಸರ್ಕಾರದ 2ನೇ ಕಾರಣ ಕೇಳುವ ನೋಟಿಸಿಗೆ ನೀಡಿರುವ ಲಿಖಿತ ಹೇಳಿಕೆಯಲ್ಲಿ ಈ ಕೆಳಕಂಡಂತೆ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.

- It is further submits that he was working as PDO in relevant point of time. He neither demanded nor accepted any illegal gratification and he never met the complainant and not demanded any illegal gratification as alleged by the complainant. As per the alleged date of apprehension i.e..09.09.2010 no work was pending before him, as the concerned file of the complainant was already completed. i.e.,08.09.2010 by signing the licence certificate of the complainant
- The complainant tried to thrust the bribe amount to my pocket and I have refused to receive the same. The complainant to fix me, he handed over the bribe money to Sri vijaya who was billcollector and assisting me in my work and made me and Sri.Vijaya as scapegoat. I was not present in the scene of ocuurence.
- It is the evidence of the complainant that when he met this DGO, this DGO only asked to pay the legal amount/government fees to issue trade licence and never demanded illegal gratification at any point of time .
- It is further submitted that as per the documentary evidence, it is cryastal clear that the secretary/this DGO had no power to issue trade licence on his own.
- It is submitted that, there is not even one of evidence produced by the prosecution either oral or documentary to prove the case against this DGO but the evidence which is on record totally contradicts the entire charges leveled against this DGO. Basing on all these aspects, the contention of prosecution that there was a demand and acceptance of the bribe by this DGO from the complainant is unacceptable and there is no direct or circumstantial evidence to prove the same though they had several opportunities to prove the case.

- That on keen perusal of Entrustment Mahazar, it is crystal clear that apart from convering about the payment of Government Fees there is no single utterance of demand for bribe in the entire conversion. Be that as it may, the another instance to prove my innocence in this case is that, the demand of bribe but the complainant himself gave the complaint that he has to give Rs.1000/-as bribe since no material is produced for the same and the overt act of the complainant itself shows that he wanted this DGO to fix a criminal case by hook and crook. Further more the over-tact of the complainant is only because of enmity development since he was a member of Gram panchayat of Belmannu village best known to him.

- It is submitted that, the complainant PW.3 in this enquiry proceedings is the PW2 in the criminal special case no.6/2012 on the file of Prl.sessions and Special Judge Udupi District at Udupi in the cross examination has elicited thus,

  ನನಗೆ ಗುಂಡ್ಯಡ್ಕದಲ್ಲಿ ಯಾವುದೇ ಐಸ್‌ಕ್ರೀಂ ಫ್ಯಾಕ್ಟರಿ ಇರುವುದಿಲ್ಲ. ಇಲ್ಲಿಯವರೆಗೆ ಗುಂಡ್ಯಡ್ಕದಲ್ಲಿ ನಾನು ಯಾವುದೇ ಐಸ್‌ಕ್ರೀಂ ಫ್ಯಾಕ್ಟರಿ ಹಾಕಿಲ್ಲ ಎಂದರೆ ಸರಿ. ನಾನು ಕಾರ್ಕಳ ತಾಲ್ಲೂಕು, ಬೆಳ್ಮಣ್ ಗ್ರಾಮ ಪಂಚಾಯತ್ ಸದಸ್ಯ ಎಂದರೆ ಸರಿ. ಬೆಳ್ಮಣ್ ಮತ್ತು ನಿಟ್ಟೆ ಗ್ರಾಮಗಳು ಅಕ್ಕಪಕ್ಕದಲ್ಲಿ ಇವೆ ಎಂದರೆ ಸರಿ. 1ನೇ ಆರೋಪಿ ನಿಟ್ಟೆ ಗ್ರಾಮಪಂಚಾಯತಿನಲ್ಲಿ ಪಿ.ಡಿ.ಓ ಆಗುವುದಕ್ಕಿಂತ ಮುಂಚೆ ಬೆಳ್ಮಣ್ ಗ್ರಾಮದಲ್ಲಿ ಪಂಚಾಯಿತಿ ಕಾರ್ಯದರ್ಶಿಯಾಗಿದ್ದರು ಎಂದರೆ ಸರಿ. ನಾನು ಯಾವಾಗಲೂ ರಾಜಕೀಯ ಕ್ಷೇತ್ರದಲ್ಲಿ ಇರುವುದರಿಂದ 1ನೇ ಆರೋಪಿ ಬೆಳ್ಮಣ್ ಗ್ರಾಮದಲ್ಲಿ ಪಂಚಾಯಿತಿ ಕಾರ್ಯದರ್ಶಿಯಾಗಿದ್ದ ಸಮಯ ಕೆಲಸಗಳಿಗಾಗಿ ಅನೇಕ ಬಾರಿ ಅವರ ಬಳಿ ಹೋಗುತ್ತಿದ್ದೆ ಎಂದರೆ ಸರಿ. ಆ ಸಮಯದಲ್ಲಿ 1ನೇ ಆರೋಪಿ ಹಣದ ಬೇಡಿಕೆಯನ್ನಾಗಲಿ ಅಥವಾ ಇನ್ನಿತರ ಯಾವುದೇ ಬೇಡಿಕೆಯನ್ನಾಗಲಿ ಇಟ್ಟಿರುವುದಿಲ್ಲ ಎಂದರೆ ಸರಿ. ಕೆಲವೊಂದು ಕಾನೂನಿನ ಅಡ್ಡಿ ಆತಂಕಗಳು ಇದ್ದುದರಿಂದ ಗ್ರಾಮ ಪಂಚಾಯತ್ ಕಾರ್ಯದರ್ಶಿಯಾಗಿದ್ದ 1ನೇ ಆರೋಪಿ ನನ್ನ ಕೆಲವು ಕೆಲಸಗಳನ್ನು ಆಗ ಮಾಡಿಕೊಡಲಿಲ್ಲ ಎಂದರೆ ಸರಿ. ಆ ಕಾರಣಕ್ಕಾಗಿ ನನಗೆ 1ನೇ ಆರೋಪಿಯ ಮೇಲೆ ವೈಮನಸ್ಸು ಇತ್ತು ಎಂದರೆ ಸರಿ. ಟ್ರೇಡ್ ಲೈಸೆನ್ಸ್‌ನ್ನು ಅಥವಾ ಎನ್‌ಓಸಿಯನ್ನು ಪಂಚಾಯಿತಿಯ ಕಾರ್ಯದರ್ಶಿಯನ್ನಾಗಲಿ ಅಥವಾ ಪಿ.ಡಿ.ಓ ಆಗಲಿ ಕೊಡಲು ಬರುವುದಿಲ್ಲ ಎಂದರೆ ಸರಿ. ಇದನ್ನು ಪಂಚಾಯತ್‌ನ ಸಭೆಯಲ್ಲಿಟ್ಟು ಚರ್ಚಿಸಿ ಬಹುಮತದ ನಿರ್ಧಾರವಾದ ನಂತರ ಲೈಸೆನ್ಸ್ ಅಥವಾ ಎನ್‌ಓಸಿ ಕೊಡುತ್ತಾರೆ ಎಂದರೆ ಸರಿ".

- When this being the deposition of the complainant, his evidence in the present disciplinary proceedings is contrary to the said deposition. Thus, the evidence of PW3/complainant before the enquiry officer in this proceedings is not reliable and contrary to the deposition given before the criminal court on the same allegations. Hence, the findings of the Enquiry Officer that the charges are proved against this DGO relying upon the evidence of PW.3 complainant is unsustainable.

- The findings of the enquiry officer that I being the Government servant failed to maintain absolute integrity besides devotion to duty and acted in a manner unbecoming of Government Servant is incorrect and unsustainable. So also the proposed recommendation of Hon'ble Upaloakayukta based on the findings of the enquiry officer is also unsustainable.

- Wherefore, it is submitted that, this is an eminently fit case for the Hon'ble Government not to accept the enquiry report and the recommendation of the Upalokayukta and this Hon'ble authority may kindly be pleased to drop the proceedings against me (DGO), in the interest of justice and equity.

ವಿಚಾರಣಾಧಿಕಾರಿಗಳು ತಮ್ಮ ವರದಿಯಲ್ಲಿ ಆಪಾದಿತರ ವಿರುದ್ಧದ ಆರೋಪಗಳನ್ನು ಸಾಬೀತುಪಡಿಸಲು ಪ್ರಮುಖವಾಗಿ ವರದಿಯಲ್ಲಿ ಮೇಲ್ಕಂಡ ಅಂಶಗಳನ್ನು ಅಲ್ಲಗಳೆಯಲು ಸಮರ್ಥವಾದ ಕಾರಣಗಳನ್ನು ನೀಡಿರುತ್ತಾರೆ. ಅವುಗಳ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆ.

"The DGO has taken a contention that he was not at all presented the scene of occurrence. He was in the training program in Taluk Panchayat Office. Therefore there was no occasion for him to demand and receive the bribe amount from the complainant. If that is so there would have been no occasion to the bill collector Vijay to be present near Taluk Panchayat Office. The facts and record show that bill collector Vijay was present at the time of trap, when the complainant approached DGO, the DGO asked the complainant to hand over the money to Vijay. On the instructions of DGO, Vijay has received the money and kept it in his shirt pocket. Therefore this contention of DGO cannot accepted.

The oral and documentary evidence on the record shows that on 08.09.2010 on the instructions of the instructions of IO, complainant went and enquired the DGO, at the time the DGO demanded for bribe amount, the complainant recorded the voice conversation came back and lodged Ex P3 on 09/09/2010. The IO secured the presence panchas, introduced the complainant and explained the contents of the complaint. Complainant presented Rs.1000(500X2). Panchas noted down the numbers. Police staff applied phenolphthalein powder to the notes. Pancha Nagesh kept the tainted amount into the shirt pocket of the complainant. Handwash of pancha Nagesh was taken in sodium carbonate solution and it turned into pink color. I.O has taken the photograph and handed over the voice recorder to the complainant and panchas and then drawn the entrustment mahazar Ex.P1.

Then all of them went to Karkala Taluk Panchayat, but DGO was not present. Then all of them went near Taluk Panchayat Office the complainant and PW-1 went to meet the DGO. DGO gave instructions to the complainant to hand over the money to Vijay. Accordingly the complainant gave the money to Vijay, Vijay received the same and had kept it in his shirt pocket. The handwash of Vijay was turned into pink color. The I.O seized the bribe amount in the presence of panchas from the possession of Vijay. According to Ex.D.1 the prescribed fee was only Rs.500/- but the tainted amount received from Vijay was Rs.1000/-. The complainant had already paid the requisite fee and shown the receipt to the DGO, at that time the DGO has put the signature to the form. If he had no intention to demand and receive the bribe amount , the DGO

would have not called the complainant to come to Taluk Panchayath Office, Karkala along with form and receipt.

Therefore I hold that DGO while working as Development Officer of Nitte Grama Panchayat in Karkala Taluk of Udupi District, the complainant namely Sandeepkumar of Nandalike in Karkala Taluk approached on 07.09.2010 to enquire about permission to start ice cream factory in the rented building of Sri. Sadashiva Hegde at Nitte and then asked the complainant to pay bribe of Rs.2,000/- and on 09.09.2010 received bribe of Rs.1,000/- from the complainant to show the official favour.

Thereby DGO has failed to maintain absolute integrity and devotion to duty, acted in a manner of unbecoming of a Government Servant as enumerated U/R 3 (1)(i) to (iii) of Karnataka Civil Service(Conduct)Rules 1966. Hence, I proceed to answer this point in the affirmative.

The disciplinary Authority has proved the charges as framed against the DGO Sri. B.R.Salotagi , the then Panchayath Development officer, Nitte Grama Panchayath, Karkala Taluk, Udupi District.

ಸರ್ಕಾರವು, ಆಪಾದಿತರು 2ನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಲಿಖಿತ ಹೇಳಿಕೆ ಮತ್ತು ವಿಚಾರಣಾ ನಡವಳಿ ದಾಖಲೆಗಳು ಮತ್ತು ಸಾಕ್ಷ್ಯಾಧಾರಗಳನ್ನು ವಿವರವಾಗಿ ಪರಿಶೀಲಿಸಿದೆ. ವಿಚಾರಣಾಧಿಕಾರಿಯವರು ವಿವರವಾದ ಸಮರ್ಥನೆಯೊಂದಿಗೆ ಆರೋಪವನ್ನು ಸಾಬೀತುಪಡಿಸಿರುತ್ತಾರೆ. ಮಾನ್ಯ ಉಪಲೋಕಾಯುಕ್ತರು ವಿಚಾರಣಾ ವರದಿಯನ್ನು ಅಂಗೀಕರಿಸಿ ಆರೋಪದ ತೀವ್ರತೆಗೆ ಅನುಗುಣವಾಗಿ ಶ್ರೀ ಬಿ.ಆರ್.ಸಾಲೋಟಗಿ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ನಿಟ್ಟೆ ಗ್ರಾಮ ಪಂಚಾಯತಿ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ, ರವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 214(1)(ಎ)ರಡಿಯಲ್ಲಿ "ಸದರಿ ನೌಕರರ ಪಿಂಚಣಿ ಸೌಲಭ್ಯದಲ್ಲಿ ಶೇ.25ರಷ್ಟು ಮೊತ್ತವನ್ನು ನಿರಂತರವಾಗಿ ಕಡಿತಗೊಳಿಸುವ" ದಂಡನೆಯನ್ನು ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ. ವಿಚಾರಣಾಧಿಕಾರಿಯವರು ಆಪಾದನೆಯನ್ನು ಸಾಬೀತುಪಡಿಸಲು ತಮ್ಮ ವರದಿಯಲ್ಲಿ ವಿವರವಾದ ಕಾರಣಗಳನ್ನು ನೀಡಿರುತ್ತಾರೆ. ಸದರಿ ಕಾರಣಗಳು ಸಮರ್ಥನೀಯವಾಗಿರುತ್ತವೆ.

ಆದುದರಿಂದ ಶ್ರೀ ಬಿ.ಆರ್.ಸಾಲೋಟಗಿರವರು 2ನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಹೇಳಿಕೆ ಸಮರ್ಥನೀಯವಲ್ಲವೆಂದು ಕಂಡುಬಂದಿರುತ್ತದೆ. ಆದುದರಿಂದ ಸರ್ಕಾರವು ವಿಚಾರಣಾ ವರದಿ ಹಾಗೂ ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಪರಿಶೀಲಿಸಿ ಶ್ರೀ ಬಿ.ಆರ್.ಸಾಲೋಟಗಿ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ನಿಟ್ಟೆ ಗ್ರಾಮ ಪಂಚಾಯತಿ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ, ರವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 214(1)(ಎ)ರಡಿಯಲ್ಲಿ "ಸದರಿ ನೌಕರರ ಪಿಂಚಣಿ ಸೌಲಭ್ಯದಲ್ಲಿ ಶೇ.25ರಷ್ಟು ಮೊತ್ತವನ್ನು ನಿರಂತರವಾಗಿ ಕಡಿತಗೊಳಿಸುವ" ದಂಡನೆಯನ್ನು ವಿಧಿಸಲು ನಿರ್ಣಯಿಸಿದೆ.

ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 82 ಗ್ರಾಪಂಕಾ 2018**

**ಬೆಂಗಳೂರು, ದಿನಾಂಕ:10-07-2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವಾ (ನಡತೆ)ನಿಯಮಗಳು 1966ರ ನಿಯಮ 3(1) (i) ರಿಂದ (iii)ರನ್ವಯ ದುರ್ನಡತೆ ಎಸಗಿರುವುದು ಸಾಬೀತಾಗಿರುವ ಹಿನ್ನೆಲೆಯಲ್ಲಿ, ಸರ್ಕಾರವು, ಶ್ರೀ ಬಿ.ಆರ್.ಸಾಲೋಟಗಿ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ನಿಟ್ಟೆ ಗ್ರಾಮ ಪಂಚಾಯತಿ,

ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ, ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 214(1)(ಎ)ರಡಿಯಲ್ಲಿ "ಸದರಿ ನೌಕರರ ಪಿಂಚಣಿ ಸೌಲಭ್ಯದಲ್ಲಿ ಶೇ.25ರಷ್ಟು ಮೊತ್ತವನ್ನು ನಿರಂತರವಾಗಿ ಕಡಿತಗೊಳಿಸುವ" ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಉಡುಪಿ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ.
6. ಶ್ರೀ ಬಿ.ಆರ್.ಸಾಲೋಟಗಿ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ನಿಟ್ಟೆ ಗ್ರಾಮ ಪಂಚಾಯತಿ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ,
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.